# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

# ಸಿಂಡಿಕೇಟ್ ಸಭೆಯ ನಡಾವಳಿಗಳು

ದಿನಾಂಕ : ಶನಿವಾರ 21-09-2019

ಸಮಯ : ಮಧ್ಯಾಹ್ನ 02: 30 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ,
ರಾ.ಚ.ವಿ.ವಿ. ಬೆಳಗಾವಿ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಂದೂಡಲ್ಪಟ್ಟ ಸಾಮಾನ್ಯ ಸಿಂಡಿಕೇಟ್ ಸಭೆಯ ದಿನಾಂಕ **21 ಸಪ್ಟೆಂಬರ್ 2019** ರಂದು **ಮಧ್ಯಾಹ್ನ 02.30** ಘಂಟೆಗೆ ನಡೆದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

**I. ಹಾಜರಿದ್ದ ಸದಸ್ಯರು**

| | | |
|---|---|---|
| 1. | **ಪ್ರೊ. ಎಂ. ರಾಮಚಂದ್ರಗೌಡ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಡಾ. ಎ.ಬಿ.ಪುಂಡಲೀಕ, ಉಪ-ನಿರ್ದೇಶಕರು,ಸಾ.ಶಿ.ಇ. ಬೆಳಗಾವಿ | ಸದಸ್ಯರು |
| 3. | ಪ್ರೊ. ಡಿ.ಎನ್. ಪಾಟೀಲ | ಸದಸ್ಯರು |
| 4. | ಶ್ರೀ ನರಸಿಂಹ ರಾಯಚೂರ | ಸದಸ್ಯರು |
| 5. | ಶ್ರೀ ಬಸವರಾಜ ಎನ್. ಚಿಕ್ಕನಗೌಡರ | ಸದಸ್ಯರು |
| 6. | ಡಾ. ಎಚ್. ಐ. ತಿಮ್ಮಾಪೂರ | ಸದಸ್ಯರು |
| 7. | ಡಾ.(ಶ್ರೀಮತಿ) ಎಸ್.ಐ. ಮಡಿವಾಳಪ್ಪಾಗೋಳ | ಸದಸ್ಯರು |
| 8. | ಡಾ. ವ್ಹಿ.ಎಲ್. ಪೂಜಾರಿ | ಸದಸ್ಯರು |
| 9. | ಪ್ರೊ. ಜೆ.ಸಿ.ಚಿಟ್‌ಕೂರ | ಸದಸ್ಯರು |
| 10. | **ಪ್ರೊ. ರಂಗರಾಜ ವನದುರ್ಗ** | **ಕುಲಸಚಿವರು(ಮೌ) ಹಾಗೂ ಸದಸ್ಯರು** |
| 11. | **ಪ್ರೊ. ಬಸವರಾಜ ಪದ್ಮಶಾಲಿ** | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

**II. ಹಾಜರಾಗದ ಸದಸ್ಯರು:**

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

**ವಿದ್ಯಾಸಂಗಮ, ಬೆಂಗಳೂರು–ಪೂನಾ ರಾ.ಹೆ.–4, ಬೆಳಗಾವಿ–591156**

**ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು**

**ವಿಷಯ:** ದಿನಾಂಕ 21 ಸಪ್ಟೆಂಬರ್ 2019 ರಂದು ಜರುಗಿದ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡಾವಳಿಗಳು.

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2)

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 13-09-2019

3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 13-09-2019

**ಪ್ರಸ್ತಾವನೆ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರ ಸಭೆ ಆಯೋಜನೆ ಮಾಡಿ ಮಾನ್ಯ ಕುಲಪತಿಗಳು ಹಾಗೂ ಪ್ರಾಧಿಕಾರದ ಸಭಾಧ್ಯಕ್ಷರಾದ ಪ್ರೊ. ಎಂ. ರಾಮಚಂದ್ರಗೌಡ ಇವರು ಸಭೆಗೆ ಆಗಮಿಸಿದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಗೆ ಹೊಸದಾಗಿ ಪ್ರಾಂಶುಪಾಲರಲ್ಲಿ ನಾಮನಿರ್ದೇಶನಗೊಂಡ ಡಾ. ವ್ಹಿ.ಎಲ್. ಪೂಜಾರಿ ಹಾಗೂ ಪ್ರೊ. ಜೆ.ಸಿ. ಚಿಟ್‌ಕೂರ ಇವರನ್ನು ಮಾನ್ಯ ಕುಲಪತಿಗಳು ಹೂ ಗುಚ್ಛ ನೀಡುವುದರ ಮೂಲಕ ಸ್ವಾಗತಿಸಿ ಮತ್ತು ನಿರ್ಗಮಿತ ಪ್ರಾಂಶುಪಾಲರನ್ನು ವಿಶ್ವವಿದ್ಯಾಲಯದ ಪರವಾಗಿ ಕೃತಜ್ಞತೆ ಸಲ್ಲಿಸಿದರು.

ಕುಲಸಚಿವರು ಮತ್ತೊಮ್ಮೆ ಸಭೆಯನ್ನು ಸ್ವಾಗತಿಸಿ ವಿಷಯ ಸೂಚಿಗಳನ್ನು ಪ್ರಸ್ತಾಪಿಸಿದರು.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಂದೂಡಲ್ಪಟ್ಟ ಸಿಂಡಿಕೇಟ್ ಸಭೆ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 21-09-2019 ರಂದು ಕೈಗೊಂಡ ತೀರ್ಮಾನಗಳು.**

| ಕ್ರ.ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 1 | 2019/09/01 | ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| | ತೀರ್ಮಾನ | **ದಿನಾಂಕ 30-07-2019 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು.** |
| 2 | 2019/09/02 | ಬೋಧಕ ಸಿಬ್ಬಂದಿಗಳ ಕೋರಿಕೆ ಮೇರೆಗೆ ಬೇರೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವ ಬಗ್ಗೆ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | **ಬೋಧಕ ಸಿಬ್ಬಂದಿಗಳ ಕೋರಿಕೆ ಮೇರೆಗೆ ಈ ಕೆಳಕಾಣಿಸಿದ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿದ್ದಕ್ಕಾಗಿ ಸಭೆಯು ಅನುಸಮರ್ಥನೆ ನೀಡಿತು.**<br>1. **ಡಾ. ಮಲ್ಲಮ್ಮ ವ್ಹಿ ರೆಡ್ಡಿ, ಸಹಾಯಕ ಪ್ರಾಧ್ಯಾಪಕರು** — **ಕೇಂದ್ರಿಯ ವಿಶ್ವವಿದ್ಯಾಲಯ, ಸಹ ಪ್ರಾಧ್ಯಾಪಕರ ಹುದ್ದೆಗೆ.**<br>2. **ಡಾ. ರಮೇಶ ಎಂ.ಎನ್., ಸಹಾಯಕ ಪ್ರಾಧ್ಯಾಪಕರು** — **ಕೇಂದ್ರಿಯ ವಿಶ್ವವಿದ್ಯಾಲಯ, ಸಹ ಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕರ ಹುದ್ದೆಗೆ.** |

| | | |
|---|---|---|
| 3 | 2019/09/03 | ಕ.ವಿ.ವಿ.ವ್ಯಾಪ್ತಿಯಲ್ಲಿದ್ದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು ರಾ.ಚ.ವಿ.ವಿದ ವ್ಯಾಪ್ತಿಗೆ ಸ್ಥಳಾಂತರ ಮಾಡಿ ಸರ್ಕಾರವು ಆದೇಶಿಸಿದ್ದರ ಪ್ರಯುಕ್ತ ಸದರಿ ಮಹಾವಿದ್ಯಾಲಯದವರು ಶಾಶ್ವತ ಸಂಯೋಜನೆ ಮುಂದುವರಿಕೆಗೆ ಸಲ್ಲಿಸಿದ ಅರ್ಜಿಗೆ ಮುಂದಿನ ಕ್ರಮ ಜರುಗಿಸಲಾಗಿದ್ದು, ಸದರಿ ಅರ್ಜಿಯನ್ನು ಅನುಸಮರ್ಥನೆ ಹಾಗೂ ತನಿಖಾ ಸಮಿತಿಯವರು ಪರಿಶೀಲನೆ ಮಾಡಿ ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ಇರುವುದರಿಂದ ತಾತ್ಕಾಲಿಕ ಮುಂದುವರಿಕೆ ಸಂಯೋಜನೆ ನೀಡಿರುವ ವರದಿಯನ್ನು ಮಂಡಿಸುವ ಕುರಿತು. |
| | ತೀರ್ಮಾನ | **ಕ.ವಿ.ವಿ.ವ್ಯಾಪ್ತಿಯಲ್ಲಿದ್ದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು ರಾ.ಚ.ವಿ.ವಿದ ವ್ಯಾಪ್ತಿಗೆ ಸ್ಥಳಾಂತರ ಮಾಡಿ ಸರ್ಕಾರವು ಆದೇಶಿಸಿದ್ದರ ಪ್ರಯುಕ್ತ ಸದರಿ ಮಹಾವಿದ್ಯಾಲಯದವರು ಶಾಶ್ವತ ಸಂಯೋಜನೆ ಮುಂದುವರಿಕೆಗೆ ಸಲ್ಲಿಸಿದ ಅರ್ಜಿಗಳಿಗೆ ಸಭೆಯು ಅನುಸಮರ್ಥನೆ ನೀಡಿತು ಹಾಗೂ ತನಿಖಾ ಸಮಿತಿಯವರು ಪರಿಶೀಲನೆ ಮಾಡಿ ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ಇರುವುದರಿಂದ ತಾತ್ಕಾಲಿಕ ಮುಂದುವರಿಕೆ ಸಂಯೋಜನೆ ನೀಡಿರುವ ವರದಿಗಳಿಗೆ ಅನುಮೋದನೆ ನೀಡಿತು.** |
| 4 | 2019/09/04 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರಿಗೆ Convenience allowance ನೀಡಲು ವಿನಂತಿಸಿರುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರಿಗೆ ಸರಕಾರದ ಆದೇಶದಂತೆ ರೂ. 600/-ಗಳನ್ನು, Convenience allowance ಸೆಪ್ಟೆಂಬರ್ 2019 ರಿಂದ ಜಾರಿಗೆ ಬರುವಂತೆ ನೀಡಲು ಸಭೆಯು ಅನುಮೋದನೆ ನೀಡಿತು.** |
| 5 | 2019/09/05 | ಡಾ. ಟಿ.ಎನ್. ತಾಂಡವಗೌಡ, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ, ರಾಣಿಚನ್ನಮ್ಮ ವಿಶ್ವವಿದ್ಯಾಲಯ ಇವರನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡುವ ವಿಷಯವನ್ನು ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | **ಡಾ. ಟಿ.ಎನ್. ತಾಂಡವಗೌಡ, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ ಇವರ ಅವಶ್ಯಕತೆ ಹಾಗೂ ವಿದ್ಯಾರ್ಥಿಗಳಿಗೆ ಬೋಧನೆಯನ್ನು ಕೈಗೊಳ್ಳುವ ಹಿತದೃಷ್ಠಿಯಿಂದ ಸದರಿಯವರ ಸೇವೆಯನ್ನು ವಿಶ್ವವಿದ್ಯಾಲಯದಲ್ಲಿ ಮುಂದುವರೆಸಲು ನಿರ್ಧಸಲಾಯಿತು. ಅಲ್ಲದೆ ವಿಶ್ವವಿದ್ಯಾಲಯದಲ್ಲಿ ಸದ್ಯ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುತಿರುವ ಕಾರಣ ಸದರಿಯವರನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗಾಗಿ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡದಿರಲು ಸಭೆಯು ತೀರ್ಮಾನಿಸಿತು. ಮುಂದುವರೆದು, ಮುಂದಿನ ದಿನಗಳಲ್ಲಿ ಯಾವುದೇ ಅಧ್ಯಾಪಕರು ಸಮಾನಾಂತರ ಹುದ್ದೆಗಳಿಗೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿದಲ್ಲಿ, ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡದಿರಲು ಸಭೆಯು ತೀರ್ಮಾನಿಸಿತು.** |
| 6 | 2019/09/06 | ಪ್ರೊ.(ಶ್ರೀಮತಿ) ಎಚ್.ಎಂ. ಶೈಲಜಾ ನಿವೃತ್ತ ಪ್ರಾಧ್ಯಾಪಕರು ಇವರಿಗೆ ಪಿಂಚಣಿ ಸೌಲಭ್ಯ ಮಂಜೂರಾತಿ ಬಗ್ಗೆ. |
| | ತೀರ್ಮಾನ | **ಪ್ರೊ.(ಶ್ರೀಮತಿ) ಎಚ್.ಎಂ. ಶೈಲಜಾ ನಿವೃತ್ತ ಪ್ರಾಧ್ಯಾಪಕರು ಇವರಿಗೆ ಕೆ.ಸಿ.ಎಸ್.ಆರ್. ನಿಯಮಾವಳಿ 95 ರಂತೆ ವಯೋನಿವೃತ್ತಿಯನ್ನು ಘಟನೋತ್ತರ ಮಂಜೂರಾತಿಯೊಂದಿಗೆ, ಕೆ.ಸಿ.ಎಸ್.ಆರ್. ನಿಯಮ 283 ರಂತೆ ವಯೋನಿವೃತ್ತಿ ಪಿಂಚಣಿ/ಪಿಂಚಣಿ ಸೌಲಭ್ಯಗಳನ್ನು ಲೆಕ್ಕ ಪರಿಶೋಧನೆಯ ನಿಬಂಧನೆಗಳಿಗೆ ಒಳಪಡಿಸಿ ಪಿಂಚಣಿ ಆದೇಶ ಹೊರಡಿಸಲು ಸಭೆಯು ಅನುಮೋದನೆ ನೀಡಿತು.** |

| | |
|---|---|
| **Gross Pension w.e.f.01-04-2017** | **35,736 / month** |
| **DCRG** | **6,41,259.00** |
| **Family Pension** | **17,896.00** |
| **Commutation** | **13,07,938.00** |
| **Net Pension** | **23,824 / month** |

| | | |
|---|---|---|
| 7 | 2019/09/07 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಭೌಗೋಳಿಕ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳಿಗೆ ದೂರಶಿಕ್ಷಣ ನೀಡುವ ಉದ್ದೇಶದಿಂದ ಕುವೆಂಪು ಹಾಗೂ ಮೈಸೂರು ವಿಶ್ವವಿದ್ಯಾಲಯಗಳ ದೂರಶಿಕ್ಷಣ ಕೇಂದ್ರಗಳನ್ನು ಹಾಗೂ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿ ನೀಡಿರುವ ಬಗ್ಗೆ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು. |
| 8 | 2019/09/08 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ವಿಜಯಪುರ, ಆಡಳಿತ ಕಟ್ಟಡ ಹಾಗೂ ಶೈಕ್ಷಣಿಕ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಕೊಳ್ಳುವ ಪ್ರಸ್ತಾವನೆಯನ್ನು ಸರಕಾರಕ್ಕೆ ಕಳುಹಿಸಲು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ವಿಜಯಪುರ, ಆಡಳಿತ ಕಟ್ಟಡ ಹಾಗೂ ಶೈಕ್ಷಣಿಕ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಕೊಳ್ಳಲು ತಯಾರಿಸಲಾದ ಅಂದಾಜು ವೆಚ್ಚ ರೂ.9.90 ಕೋಟಿಗಳ ಪ್ರಸ್ತಾವನೆಯನ್ನು ಸರಕಾರಕ್ಕೆ ಕಳುಹಿಸಲು ಸಭೆಯು ಅನುಮೋದನೆ ನೀಡಿತು.** |
| 9 | 2019/09/09 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ವಿಜಯಪುರ ಆವರಣದ ಗೋಡೆ ನಿರ್ಮಾಣ ಹಾಗೂ ಕಟ್ಟಡಗಳ ದುರಸ್ತಿ ಕೆಲಸಗಳನ್ನು ಕೈಕೊಳ್ಳಲು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ಸಿಂಡಿಕೇಟ್ ಸಭೆಯು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ವಿಜಯಪುರ ಆವರಣದ ಗೋಡೆ ನಿರ್ಮಾಣ ಕಾಮಗಾರಿಯ ಮೊತ್ತ ರೂ. 197.00 ಲಕ್ಷಗಳನ್ನು ಅಲ್ಪಾವಧಿ ಟೆಂಡರ್ ಮುಖಾಂತರ ಕೈಕೊಳ್ಳಲು ಅನುಮೋದನೆ ನೀಡಿತು ಹಾಗೂ ಸ್ನಾತಕೋತ್ತರ ಕೇಂದ್ರ, ವಿಜಯಪುರದ ಹಾಲಿ ಇರುವ ಕಟ್ಟಡಗಳ ದುರಸ್ತಿ ಕೆಲಸದ ಮೊತ್ತ ರೂ. 41.00 ಲಕ್ಷಗಳನ್ನು, ಪ್ರದತ್ತವಾದ ಅಧಿಕಾರ ಹೊಂದಿರುವ ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ವಿಜಯಪುರ ಇವರಿಂದ ಕೈಕೊಳ್ಳಲು ಸಭೆಯು ಅನುಮತಿ ನೀಡಿತು.<br>ಮುಂದುವರೆದು, ಸ್ನಾತಕೋತ್ತರ ಕೇಂದ್ರ ಜಮಖಂಡಿ ಆವರಣದ ಗೋಡೆ ನಿರ್ಮಾಣ ಕಾಮಗಾರಿಯನ್ನು ಅಲ್ಪಾವಧಿ ಟೆಂಡರ್ ಮುಖಾಂತರ ಕೈಕೊಳ್ಳಲು ಅನುಮೋದನೆ ನೀಡಿತು.** |
| 10 | 2019/09/10 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆವರಣದಲ್ಲಿರುವ ಕಟ್ಟಡಗಳಲ್ಲಿ ಅವಶ್ಯಕ ದುರಸ್ತಿ ಕೆಲಸಗಳನ್ನು ಕೈಕೊಳ್ಳಲು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆವರಣದಲ್ಲಿರುವ ವಸತಿ ಗೃಹಗಳ ಕಟ್ಟಡಗಳಲ್ಲಿ ಅವಶ್ಯಕ ದುರಸ್ತಿ ಮೊತ್ತ ರೂ. 16.00 ಲಕ್ಷಗಳ ಕಾಮಗಾರಿಯನ್ನು ಕಾರ್ಯನಿರ್ವಾಹಕ ಇಂಜಿನೀಯರ, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪಮೆಂಟ್ ಲಿಮಿಟೆಡ್, ಬೆಳಗಾವಿ ಇವರಿಂದ ಕೈಕೊಳ್ಳಲು ಸಭೆಯು ಅನುಮೋದನೆ ನೀಡಿತು.<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆವರಣದ ಬಾಕಿ ಉಳಿದ ವಸತಿ ಗೃಹಗಳ, ವಿದ್ಯಾರ್ಥಿ ವಸತಿ ನಿಲಯ, ಆಡಳಿತ ಕಟ್ಟಡದ ಅವಶ್ಯಕ ದುರಸ್ತಿ ಕಾಮಗಾರಿಗಳನ್ನು ಹಾಗೂ ಮುಖ್ಯ ಕಟ್ಟಡದ ಶೌಚಾಲಯದ ದುರಸ್ತಿ ಮತ್ತು ಎರಡನೇ ಮಹಡಿಯಲ್ಲಿ PVC false ceiling ಮತ್ತು MS Mesh ನ್ನು ಪ್ಯಾಸೇಜಿನ ಕಿಟಕಿಗಳಿಗೆ ಅಳವಡಿಸಲು ಅಲ್ಪಾವಧಿ ಟೆಂಡರ್ ಮುಖಾಂತರ ಕೈಕೊಳ್ಳಲು ಸೂಚಿಸಿತು.** |
| 11 | 2019/09/11 | ಪ್ರೊ. ಎನ್. ಮಾರುತಿರಾವ್ ಇವರ ಮೇಲೆ ಮಾಡಲಾದ ಆಪಾದನೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸುವ ಕುರಿತು. |
| | ತೀರ್ಮಾನ | **ಪ್ರೊ. ಎನ್. ಮಾರುತಿರಾವ್ ಇವರ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಸಭೆಯು ಸದರಿಯವರಿಗೆ ಈಗಾಗಲೇ ನೀಡಲಾಗಿರುವ ಅಮಾನತ್ತಿನ ಆದೇಶವನ್ನು ಹಿಂಪಡೆದು ಅವರ ಮೇಲೆ ಮಾಡಲಾದ ಆಪಾದನೆ ಮರುಕಳಿಸಿದಂತೆ ಎಚ್ಚರಿಸಿ ಸದರಿಯವರಿಂದ ಮುಚ್ಚಳಿಕೆ ಪತ್ರ ತೆಗೆದುಕೊಂಡು, ವಿಜಯಪುರದ ಸ್ನಾತಕೋತ್ತರ ಕೇಂದ್ರದ ವಾಣಿಜ್ಯಶಾಸ್ತ್ರ ವಿಭಾಗದ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿತು.<br>ಮುಂದುವರೆದು ಪ್ರೊ. ಎನ್. ಮಾರುತಿರಾವ್ ಇವರಿಗೆ ಐದು ವರ್ಷದವರೆಗೆ ಯಾವುದೇ ಪರೀಕ್ಷಾ ಕಾರ್ಯಗಳನ್ನು ನೀಡದಿರಲು ಸಭೆಯಲ್ಲಿ ತೀರ್ಮಾನಿಸಲಾಯಿತು.** |

| | | |
|---|---|---|
| 12 | 2019/09/12 | ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ K-Yan All-in-One Integrated Projector ಖರೀದಿಸಲು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ವಿಶ್ವವಿದ್ಯಾಲಯದ ವಿವಿಧ ವಿಭಾಗದ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರುಗಳಿಗೆ ಅವಶ್ಯಕವಿರುವ ಬಹು ಕ್ರಿಯಾತ್ಮಕ ಹಾಗೂ ಸುಧಾರಿತ ತಂತ್ರಜ್ಞಾನ ಹೊಂದಿರುವ K-Yan All-in-One Integrated Projector ಖರೀದಿಸಲು ಸಭೆಯು ಅನುಮೋದನೆ ನೀಡಿತು.**<br>**ಸಭೆಯು 40 i3 Integrated Projector ಗಳನ್ನು ಸಮಾಜ ವಿಜ್ಞಾನ ವಿಭಾಗಕ್ಕೆ ಹಾಗೂ 20 i3 Integrated Projector ಗಳನ್ನು ವಿಜ್ಞಾನ ವಿಭಾಗಕ್ಕೆ ಪೂರೈಸಲು ತೀರ್ಮಾನಿಸಿತು.** |
| | | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ಚರ್ಚಿಸುವ ವಿಷಯಗಳು.** |
| I | 2019/09/I | ಶ್ರೀಮತಿ ಶಾರದಾ ಗುರಾಣಿ, ಪ್ರಥಮ ದರ್ಜೆ ಸಹಾಯಕರು, ಇವರು ದೀರ್ಘಾವಧಿಯ ಗೈರು ಹಾಜರಿರುವ ಕುರಿತು. |
| | ತೀರ್ಮಾನ | **ಶ್ರೀಮತಿ ಶಾರದಾ ಗುರಾಣಿ, ಪ್ರಥಮ ದರ್ಜೆ ಸಹಾಯಕರು, ಇವರು ದೀರ್ಘಾವಧಿಯ ಗೈರು ಹಾಜರಿರುವ ಕಾರಣ ಸಭೆಯು ಕರ್ನಾಟಕ ನಾಗರೀಕ ಸೇವಾ ನಿಯಮಾನುಸಾರ ದಿನಪತ್ರಿಕೆಗಳಲ್ಲಿ ಪ್ರಕಟಣೆಯ ಮೂಲಕ ನೋಟೀಸು ಜಾರಿಗೊಳಿಸಲು ಸೂಚಿಸಿತು. ನೋಟೀಸಿಗೂ ಸ್ಪಂದಿಸದಿದ್ದಲ್ಲಿ ಸದರಿಯವರನ್ನು ಸೇವೆಯಿಂದ ಬಿಡುಗಡೆಗೊಳಿಸಲು ಸಭೆಯು ತೀರ್ಮಾನಿಸಿತು.** |
| II | 2019/09/II | ಪಿಎಚ್.ಡಿ. ಸಂಶೋಧನಾ ಅವಧಿ ಮುಗಿದ/ ಪಿಎಚ್.ಡಿ. ಪ್ರೌಢ ಪ್ರಬಂಧವನ್ನು ಸಲ್ಲಿಸುವ ಅವಧಿ ಮುಗಿದ ನಂತರದಲ್ಲಿ ಅವಧಿ ವಿಸ್ತರಣೆಗಾಗಿ ಮನವಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಅವಧಿ ವಿಸ್ತರಣೆಗೆ ಅನುಮತಿ ನೀಡುವ ಕುರಿತು. |
| | ತೀರ್ಮಾನ | **ಪಿಎಚ್.ಡಿ. ಸಂಶೋಧನಾ ಅಧ್ಯಯನದ ಅವಧಿ ಮುಗಿದ ನಂತರ ಅವಧಿ ವಿಸ್ತರಣೆ ಹಾಗೂ ಪಿಎಚ್.ಡಿ. ಪ್ರೌಢ ಪ್ರಬಂಧವನ್ನು ಸಲ್ಲಿಸುವ ಅವಧಿ ಮುಗಿದ ನಂತರ ಅವಧಿ ವಿಸ್ತರಣೆಗೆ ಮನವಿ ಸಲ್ಲಿಸಿರುವ ವಿದ್ಯಾರ್ಥಿಗಳಿಂದ ಹೆಚ್ಚುವರಿ ದಂಡವನ್ನು ವಿಧಿಸಿ, ಸದರಿ ಅವಧಿಗಳನ್ನು ವಿಸ್ತರಣೆ ಮಾಡಲು ಸಭೆಯು ಅನುಮತಿ ನೀಡಿತು.** |
| III | 2019/09/III | ಶ್ರೀಮತಿ ಮೀನಾಕ್ಷಿ ಆರ್. ಕಲ್ಲೂರ ವಿದ್ಯಾವರ್ಧಕ ಸಂಘದ, ಶಿಕ್ಷಣ ಮಹಾವಿದ್ಯಾಲಯವನ್ನು ಸ್ಥಳಾಂತರ ಮಾಡಲು ವಿಶ್ವವಿದ್ಯಾಲಯ ಸ್ಥಳೀಯ ತನಿಖಾ ಸಮಿತಿಯವರು ಪರಿಶೀಲನೆ ಮಾಡಿ ನೀಡಿರುವ ವರದಿಯನ್ನು ಸಭೆಯ ಅನುಸಮರ್ಥನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | **ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| IV | 2019/09/IV | ಬಂಜಾರಾ ವಿದ್ಯಾವರ್ಧಕ ಸಂಘದ, ಬಂಜಾರಾ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಹೆಸರು ಬದಲಾವಣೆಗೆ ವಿನಂತಿಸಿರುವ ಕುರಿತು. |
| | ತೀರ್ಮಾನ | **ಸಿಂಡಿಕೇಟ್ ಸಭೆಯು ಬಂಜಾರಾ ವಿದ್ಯಾವರ್ಧಕ ಸಂಘದ, ಮಹಾವಿದ್ಯಾಲಯವನ್ನು 'ವಿಜಯಪುರ ಜಿಲ್ಲಾ ಬಂಜಾರಾ ವಿದ್ಯಾವರ್ಧಕ ಸಂಘದ, ಬಂಜಾರಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಂಜಾರಾ ನಗರ, ಸೋಲಾಪೂರ ರಸ್ತೆ, ವಿಜಯಪುರ –589103 ತಾ: ವಿಜಯಪುರ ಜಿ: ವಿಜಯಪುರ' ಎಂದು ಹೆಸರು ಬದಲಾವಣೆ ಮಾಡಲು ಅನುಮೋದನೆ ನೀಡಿತು.** |
| V | 2019/09/V | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017–18 ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017–18 ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಪರಿಶೀಲಿಸಿ, ಅನುಮೋದನೆ ನೀಡಿತು ಹಾಗೂ ಸರಕಾರಕ್ಕೆ ಸಲ್ಲಿಸಲು ಸೂಚಿಸಿತು.** |

<table>
<tr><td>VI</td><td>2019/09/VI</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ದಶಕೋತ್ಸವವನ್ನು ಆಚರಿಸುವ ಕುರಿತಂತೆ ಸಭೆಯಲ್ಲಿ ಚರ್ಚಿಸುವ ಕುರಿತು.</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ದಶಕೋತ್ಸವವನ್ನು ಆಚರಿಸುವ ಕುರಿತಂತೆ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯು ಸದರಿ ಕಾರ್ಯಕ್ರಮಕ್ಕಾಗಿ ಈ ಕೆಳಕಾಣಿಸಿದಂತೆ ಸಮಿತಿಯನ್ನು ರಚಿಸಲಾಯಿತು. ಮಾನ್ಯ ಕುಲಪತಿಗಳು, ಸಿಂಡಿಕೇಟ್ ಸದಸ್ಯರುಗಳಿಗೆ ಸದರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತಮ್ಮ ಮಾರ್ಗಸೂಚಿ ಹಾಗೂ ಸಲಹೆಗಳನ್ನು ನೀಡುವುದಾಗಿ ಕೇಳಿಕೊಂಡರು.
<table>
<tr><th>ಕ್ರಮ</th><th>ಹೆಸರು</th><th>ಪದನಾಮ</th></tr>
<tr><td>1</td><td>ಶ್ರೀ. ಬಸವರಾಜ ಎನ್.ಚಿಕ್ಕನಗೌಡರ</td><td>ಅಧ್ಯಕ್ಷರು</td></tr>
<tr><td>2</td><td>ಪ್ರೊ. ಡಿ.ಎಸ್. ಪಾಟೀಲ</td><td>ಸದಸ್ಯರು</td></tr>
<tr><td>3</td><td>ಡಾ. ಎಚ್. ಐ. ತಿಮ್ಮಾಪೂರ</td><td>ಸದಸ್ಯರು</td></tr>
<tr><td>4</td><td>ಪ್ರೊ. ಎಂ.ಎಸ್. ಮಾವಿನಕಟ್ಟಿ</td><td>ಸದಸ್ಯರು</td></tr>
</table></td></tr>
<tr><td>VI</td><td>2019/09/VI</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಜಿಮಖಾನ ವಿದ್ಯಾರ್ಥಿ ಪ್ರತಿನಿಧಿಗಳ ಆಯ್ಕೆ ನಿಯಾಮಾವಳಿಗಳಿಗೆ ಅನುಮೋದನೆ ನೀಡುವ ಕುರಿತು.</td></tr>
<tr><td>-</td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಜಿಮಖಾನ ವಿದ್ಯಾರ್ಥಿ ಪ್ರತಿನಿಧಿಗಳ ಆಯ್ಕೆ ನಿಯಾಮಾವಳಿಗಳಿಗೆ ಸಭೆಯು ಅನುಮೋದನೆ ನೀಡಿತು.</td></tr>
<tr><td>VII</td><td>2019/09/VII</td><td>ಸಿಂಡಿಕೇಟ್ ಸಭೆಯು ವೈದ್ಯಕೀಯ ಸಲಹಾ ಸಮಿತಿಯನ್ನು ಪುನರಾಚಿಸಲು ಸೂಚಿಸಿತು ಹಾಗೂ ದಿನಾಂಕ: 15-10-2019 ರೊಳಗಾಗಿ ವೈದ್ಯಕೀಯ ಸಲಹಾ ಸಮಿತಿ ಸಭೆಯನ್ನು ನಡೆಸಿ ಎಲ್ಲ ವಿಷಯವನ್ನು ಇತ್ಯರ್ಥಗೊಳಿಸಲು ತಿಳಿಸಿತು.</td></tr>
<tr><td>VIII</td><td>2019/09/VIII</td><td>ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಶ್ರೀ ನರಸಿಂಹ ರಾಯಚೂರ ಇವರು ವಿದ್ಯಾವಿಷಯಕ್ ಪರಿಷತ್ ಹಾಗೂ ಸಿಂಡಿಕೇಟ್ ಸಭೆಯ ಸದಸ್ಯರುಗಳಿಗೆ ಸಭಾ ಭತ್ಯೆಯನ್ನು ಪರಿಷ್ಕರಣೆ ಮಾಡಲು ವಿನಂತಿಸಿದರು. ಸಿಂಡಿಕೇಟ್ ಸಭೆಯು, ವಿದ್ಯಾವಿಷಯಕ್ ಪರಿಷತ್ತಿನ ಸಭೆಯ ಸದಸ್ಯರಿಗೆ ರೂ. 2000/- ಹಾಗೂ ಸಿಂಡಿಕೇಟ್ ಸಭೆಯ ಸದಸ್ಯರಿಗೆ ರೂ. 3000/- ಗಳನ್ನು ಸಭಾ ಭತ್ಯೆಯನ್ನಾಗಿ ನೀಡಲು ಅನುಮೋದನೆ ನೀಡಿತು. ಉಪ ಸಮಿತಿ ಹಾಗೂ ಸಮಾನಾಂತರ ಸಮಿತಿಗಳಿಗೆ ಆಹ್ವಾನಿತ ವಿದ್ಯಾವಿಷಯಕ್ ಪರಿಷತ್ತಿನ ಹಾಗೂ ಸಿಂಡಿಕೇಟ್ ಸದಸ್ಯರುಗಳಿಗೂ ಸದರಿ ಸಭಾ ಭತ್ಯೆಯನ್ನು ನೀಡುವುದಾಗಿ ಸೂಚಿಸಿತು.</td></tr>
</table>

ಕೊನೆಯದಾಗಿ ಕುಲಸಚಿವರು(ಮೌ) ಇವರು ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯು ಸಂಪನ್ನಗೊಂಡಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು　　　　ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಗೌರವಾನ್ವಿತ ಸಿಂಡಿಕೇಟ್ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.